ನಾನು ಎಲೆಗಳನ್ನು ಕಲಸುತ್ತಲೇ ಅವಳನ್ನು ಕೇಳಿದೆ. ಅವಳು ನನ್ನ ಕಡೆ ನೋಡಿದಳು.

"ನಿಜವಾಗ್ಲೂ, ಮಾಡ್ಲಾ" ನಾನು ಎಲೆಗಳನ್ನು ಬದಿಗಿಟ್ಟು ಸುಮ್ಮನೆ ಮಲಗಿದ್ದ ಅವಳ ಬೆನ್ನು ತಿಕ್ಕತೊಡಗಿದೆ.

ರಬ್ಬು ಮರುದಿನ ಹಿಂತಿರುಗಿ ಬರುವವಳಿದ್ದಳು... ಆದರೆ ಬರಲಿಲ್ಲ. ಬೇಗಮ್ ಜಾನ್ ಕರ್ಕಶಳಾಗತೊಡಗಿದಳು. ಲೆಕ್ಕವಿಲ್ಲದಷ್ಟು ಕಪ್ಪು ಚಹಾ ಕುಡಿದು ಅವಳಿಗೆ ತಲೆನೋವು ಶುರುವಾಯಿತು.

ಮೇಜಿನ ಮೇಲ್ಮೈಯಂತೆ ನುಣುಪಾಗಿದ್ದ ಅವಳ ಬೆನ್ನನ್ನು ನಾನು ಮತ್ತೆ ಮಸಾಜ್ ಮಾಡಲಾರಂಭಿಸಿದೆ. ನಾನು ನಿಧಾನಕ್ಕೆ ತಿಕ್ಕುತ್ತಿದ್ದೆ. ಹೀಗಾದರೂ ಅವಳಿಗೆ ನನ್ನಿಂದ ಉಪಕಾರವಾಯಿತಲ್ಲ ಎಂದು ಖುಷಿಯಾಗಿದ್ದೆ.

"ಸ್ವಲ್ಪ ಜೋರಾಗಿ... ಪಟ್ಟಿ ತೆಗಿ" ಅಂದಳು.

"ಇಲ್ಲಿ ಒಂಚೂರು ಭುಜದ ಕೆಳಗೆ... ಹ್, ಅಲ್ಲೇ ಆಹ್! ಎಷ್ಟು ಚೆನ್ನಾಗಿದೆ..." ಮಾದಕ ಉಸಿರಾಟಗಳ ಮಧ್ಯೆ ಅವಳು ತೃಪ್ತಿಯಿಂದ ಅಂದಳು.

"ಒಂಚೂರು ಮುಂದೆ..." ಬೇಗಮ್ ಜಾನ್‌ಳ ಕೈಗಳು ಆರಾಮವಾಗಿ ಆ ಜಾಗ ತಲುಪುವಂತಿದ್ದರೂ ಅವಳು ಸೂಚನೆ ಕೊಡುತ್ತಿದ್ದಳು. ಅವಳಿಗೆ ನಾನು ಅಲ್ಲಿ ಸವರಬೇಕೆಂದಿತ್ತು. ನನಗದೆಷ್ಟು ಹೆಮ್ಮೆ! "ಇಲ್ಲಿ ಓಹ್ ಓಹ್, ಕಚಗುಳಿ ಇಡ್ತಾ ಇದ್ದಿ... ಆಹ್" ಅವಳು ಮುಗುಳ್ನಕ್ಕಳು. ನಾನು ಮಸಾಜ್ ಮಾಡುತ್ತ ಹರಟುತ್ತಲೇ ಇದ್ದೆ.

"ನಾಳೆ ನಾನು ನಿನ್ನನ್ನು ಪೇಟೆಗೆ ಕಳಿಸುತ್ತೇನೆ... ಏನು ಬೇಕು ನಿನಗೆ?... ನೀನು ಹೇಳಿದ ಹಾಗೆ ಮಲಗುವ ಏಳುವ ಗೊಂಬೆ ತರೋಣವೇ."

"ಇಲ್ಲ ಬೇಗಮ್ ಜಾನ್... ನನಗೆ ಗೊಂಬೆ ಬೇಡ... ನಾನೇನು ಚಿಕ್ಕಮಗು ಅಂದುಕೊಂಡಿರಾ?"

"ನೀನೇನು ಅಜ್ಜಿನ? ನಿನಗೆ ಗೊಂಬೆ ಬೇಡದಿದ್ದರೆ ಬಬುವಾ (ಹುಡುಗನ ಗೊಂಬೆ) ತರೋಣ. ನೀನೇ ಅದಕ್ಕೆ ಬಟ್ಟೆಗಳನ್ನು ಹಾಕುವಿಯಂತೆ. ನಿನಗೆ ಬೇಕಾದಷ್ಟು ಹಳೆ ಬಟ್ಟೆಗಳನ್ನು ಕೊಡುತ್ತೇನೆ. ಸರೀನಾ?"

"ಸರಿ" ನಾನಂದೆ.

"ಇಲ್ರಾ" ನನ್ನ ಕೈಯನ್ನು ತೆಗೆದುಕೊಂಡು ಅವಳಿಗೆ ತುರಿಕೆಯಾಗುವ ಕಡೆ ಇಟ್ಟಳು. ನಾನು ಬಬುವಾನ ಬಗ್ಗೆ ಯೋಚಿಸುತ್ತಲೇ ಅರೆಮನಸ್ಸಿನಿಂದ ತುರಿಸುತ್ತಲೇ ಇದ್ದೆ; ಬೇಗಮ್ ಜಾನ್ ಮಾತನಾಡುತ್ತಲೇ ಇದ್ದಳು.

"ಇಲ್ಕೇಳು, ನಿನಗೆ ಹೊಸ ಬಟ್ಟೆಗಳು ಬೇಕು. ನಾನು ನಾಳೆ ದರ್ಜಿಯನ್ನು ಕರೆಸಿ ಹೊಸ ಬಟ್ಟೆಗಳನ್ನು ಹೊಲಿಯಲು ಹೇಳುತ್ತೇನೆ. ನಿನ್ನ ಅಮ್ಮ ಇಲ್ಲಿ ಹೊಸ ಬಟ್ಟೆಗಳನ್ನು ಬಿಟ್ಟು ಹೋಗಿದ್ದಾಳೆ."

"ನನಗೆ ಆ ಕೆಂಪುಬಟ್ಟೆ ಬೇಡ, ಅದು ಬರೀ ಅಗ್ಗದೆಂದು ಕಾಣಿಸುತ್ತದೆ." ನಾನು ನನ್ನ ಕೈಗಳು ಎಲ್ಲಿವೆಯೆನ್ನುವುದರ ಪರಿವೆಯಿಲ್ಲದೆ ಹರಟುತ್ತಲೇ ಇದ್ದೆ. ಬೇಗಮ್ ಜಾನ್ ಸ್ತಬ್ಧಳಾಗಿದ್ದಳು... ಓಹ್ ದೇವರೇ! ನಾನು ಥಟಕ್ಕನೆ ಕೈ ಎಳೆದುಕೊಂಡೆ.

"ಯೇ ಹುಡುಗಿ, ನೋಡು ನಿನ್ನ ಕೈ ಎಲ್ಲಿದೆಂತಾ, ನನ್ನ ಎಲುಬು ನೋಯಿಸ್ತಿದ್ದೀ ನೀನು" ತುಂಟತನದಿಂದ ಬೇಗಮ್ ಜಾನ್ ನಕ್ಕಳು. ನನಗೆ ನಾಚಿಕೆಯಾಯಿತು.

"ಬಾ ಇಲ್ಲಿ, ಮಲ್ಕೋ ನನ್ಹತ್ರ" ನನ್ನ ತಲೆಯನ್ನು ಅವಳ ತೋಳಿನ ಮೇಲಿರಿಸಿ ಮಲಗಿಸಿದಳು. "ಎಷ್ಟು ಸಣ್ಣಕ್ಕಿದ್ದಿಯ ನೀನು, ಎಲುಬುಗಳು ಕಾಣಿಸ್ತಾ ಇವೆ ನೋಡು" ನನ್ನ ಪಕ್ಕೆಲುಬುಗಳನ್ನು ಲೆಕ್ಕ ಮಾಡಲು ಶುರು ಮಾಡಿದಳು.

ನಾನು ಕೊಸರಿಕೊಳ್ಳಲು ಪ್ರಯತ್ನಿಸಿದೆ.

"ಬಾ ಇಲ್ಲಿ, ನಾನೇನು ತಿಂದ್ಬಿಡ್ತೀನಾ ನಿನ್ನ. ಎಷ್ಟು ಬಿಗಿಯಾಗಿದೆ ನಿನ್ನ ಸ್ವೆಟರು! ಬೆಚ್ಚಗಿನ ಅಂಗೀನೂ ಹಾಕ್ಕೊಂಡಿಲ್ಲ ನೀನು?" ನನಗೆ ಬಹಳ ಇರಿಸುಮುರಿಸಾಯಿತು.

"ಎಷ್ಟು ಪಕ್ಕೆಲುಬುಗಳಿರುತ್ತವೆ ಮನುಷ್ಯನಿಗೆ?" ವಿಷಯ ಬದಲಾಯಿಸುತ್ತಾ ಅವಳು ಕೇಳಿದಳು.

"ಒಂದು ಬದಿಯಲ್ಲಿ ಒಂಬತ್ತು, ಇನ್ನೊಂದು ಬದಿ ಹತ್ತು" ಶಾಲೆಯಲ್ಲಿ ಕಲಿತದ್ದನ್ನು ನಾನು ಅಸ್ಪಷ್ಟವಾಗಿ ಒದರಿದೆ. "ಕೈ ತೆಗಿ... ನೋಡೋಣ... ಒಂದು, ಎರಡು, ಮೂರು..."

ನನಗೆ ಅಲ್ಲಿಂದ ಓಡಿ ಹೋಗಬೇಕೆನಿಸಿತ್ತು, ಆದರೆ ಅವಳು ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಳು. ನಾನು ನುಣುಚಿಕೊಳ್ಳಲು ಪ್ರಯತ್ನಿಸಿದೆ. ಅವಳು ಗಟ್ಟಿಯಾಗಿ ನಗಲಾರಂಭಿಸಿದಳು. ಇವತ್ತಿಗೂ